ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇರ್ಷ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.
ಅಕ್ಕಿ	ರೂಪಾಯಿ 1ಕ್ಕೆ	7	6 ರಿಂದ 6½ರ ವರಿಗೆ ಸೇರುಗಳು.
ರಾಗಿ	,, ...	13¾	14 ರಿಂದ 15ರ ವರಿಗೆ ಸೇರುಗಳು.

ವ್ಯವಸಾಯ ಕೆಲಸ—ರಾಗಿ ಪೈರುಗಳ ಕಳೇಕೀಳುವದು.

ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹೊಸಕೋಟೆ, ಕ್ರ್ಕಾಹಳ್ಳಿ, ಈ ತಾಲ್ಲೂಕುಗಳಲ್ಲಿ ಕಳೇಕೀಳುತ್ತಿದ್ದಾರೆ.
ನಿಂತಿರುವ ಪೈರುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಡಿಸ್ಟ್ರಿಕ್ಟಿನಲ್ಲೆಲ್ಲಾ ಮಳೇ ಇಲ್ಲದ್ದರಿಂದ ಕಷ್ಟ ಪಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕಾದಷ್ಟಿವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ದೇವನಹಳ್ಳಿ ತಾಲ್ಲೂಕು ಬಿದಲಪುರ ಗ್ರಾಮದಲ್ಲಿ ಪ್ಲೇಗ್ ಇದೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಬಿತ್ತುತ್ತಿದ್ದಾರೆ.
ನಿಂತಿರುವ ಪೈರುಗಳ ಸ್ಥಿತಿ—ಮಳೇ ಇಲ್ಲದ್ದರಿಂದ ಕುಷ್ಕೀ ಪೈರುಗಳು ಒಣಗುತ್ತಿವೆಯೆಂದು ರಿಪೋರ್ಟಾಗಿದೆ.
ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ, ವಾಲೂರು, ಮುಳಬಾಗಲು, ಹೊರ್ತು ವಿುಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಾರ್ತೀಕ ಭತ್ತ. ಚಿಂತಾಮಣಿ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಗುಡಿಬಂಡೆ, ಇವುಗಳಲ್ಲಿ ಹುರುಳಿ. ಕೋಲಾರದಲ್ಲಿ ರಾಗಿ.
ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಸುಪಾರಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ

11. ಕೋಲಾರದ ಚೆನ್ನಾದ ಗಣಿಗಳಲ್ಲಿಯೂ ಮತ್ತು ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಲ್ಲಲ್ಲಿ ಆದ ಕೆಲವು ಕಾಲರಾ ಕೇಸುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಆದರೆ ಬಾಗೇಪಲ್ಲಿ ತಾಲ್ಲೂಕಿನ ಪಾತಪಳ್ಳಿಯ ಹೋಬಳಿಯ ಕೆಲವು ಗ್ರಾಮಗಳಲ್ಲಿ "ಸಪ್ಪೇ ರೋಗವು" ಇರುತ್ತಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉತ್ತುವದೂ ಮತ್ತು ಬಿತ್ತುವದೂ ನಡಿಯುತ್ತಿವೆ.
ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ಗುಬ್ಬಿ. ಇವುಗಳಲ್ಲಿ ಭತ್ತ; ಮದ್ದಗಿರಿ, ಪೀರ, ಗುಬ್ಬಿ, ತಿಪಟೂರು ಇವುಗಳಲ್ಲಿ ರಾಗಿ ಮತ್ತು ಹುರುಳಿ; ಗುಬ್ಬಿಯಲ್ಲಿ ಸಾವೆ; ತುಮಕೂರಿನಲ್ಲಿ ರಾಗಿ.
ಕುಯ್ಯಲಾದ ಪೈರುಗಳು—ಚಿಕ್ಕನಾಯಕನಹಳ್ಳಿಯಲ್ಲಿ ಉದ್ದು, ಹೆಸರು ಮತ್ತು ಎಳ್ಳು; ಗುಬ್ಬಿಯಲ್ಲಿಯೂ ಮತ್ತು ತಿಪಟೂರಿನಲ್ಲಿಯೂ ರಾಗಿ ಮತ್ತು ಜೋಳ; ಗುಬ್ಬಿಯಲ್ಲಿಯೂ ಮತ್ತು ತುರುವೇಕೆರೆಯಲ್ಲಿಯೂ ಭತ್ತ ಮತ್ತು ಕಬ್ಬು; ಕುಣಿಗಲಿನಲ್ಲಿ ಕಬ್ಬು; ಪಾವಗಡದಲ್ಲಿ ರಾಗಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಬಿತ್ತಿರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಪಾವಗಡದ ತಾಲ್ಲೂಕಿನ ಗೌಡತಿ ಎಂಬ ಗ್ರಾಮದಲ್ಲಿ ಕಾಲರಾ ಇತ್ತು.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

752

200

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ವ್ಯವಸಾಯಕ್ಕೆ ತಯಾರ್ಮಾಡುತ್ತಿದ್ದಾರೆ. ಶ್ರೀರಂಗಪಟ್ಣ, ಹೆಗ್ಗಡದೇವನಕೋಟೆ, ನಂಜನಗೂಡು ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು ತಾಲ್ಲೂಕಿನಲ್ಲಿಯೂ ಹುತ್ತೂರು ಕಡಕೋಳ ಗ್ರಾಮದಲ್ಲಿಯೂ ಪೈರುಗಳು ಬಾಡುತ್ತಿವೆಯೆಂದು ರಿಪೋರ್ಟಾಗಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಎಡತೊರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸ್ಯೆರಾಗಿ, ಮತ್ತು ಎಡತೊರೆ, ನಂಜನಗೂಡು, ಕೃಷ್ಣರಾಜಪೇಟೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹುರುಳಿ, ಅವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಹುಣಸೂರು, ಹೆಗ್ಗಡದೇವನಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಹುಣಸೂರು, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತ; ಹುಣಸೂರು, ಹೆಗ್ಗಡದೇವನಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಎಳ್ಳು; ಕೃಷ್ಣರಾಜಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹಾರಕ; ಎಡತೊರೆ, ಮಳವಳ್ಳಿ, ಕೃಷ್ಣರಾಜಪೇಟೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮೈಸೂರು, ಹುಣಸೂರು, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ಹುಣಸೂರು, ಮಂಡ್ಯ, ನಂಜನಗೂಡು, ಈ ಕಸಬಾಗಳಲ್ಲಿಯೂ, ಪ್ಲೇಗು ಇರುತ್ತಲಿದೆ.

12. ನಂಜನಗೂಡು ತಾಲ್ಲೂಕಿನಲ್ಲಿ ತೊರೇಪಾವು ಮತ್ತು ಕೆಂಪೀಸಿದ್ದನಹುಂಡಿ, ಈ ಎರಡು ಗ್ರಾಮಗಳಲ್ಲಿ ದನಗಳು "ಕಾಲುಜ್ವರ, ಬಾಯಿಜ್ವರ" ಇವುಗಳಿಂದ ನರಳುತ್ತಾ ಇರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ, ಅವುಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಎಲ್ಲಾ ಕಡೆಯಲ್ಲಿಯೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬೇಲೂರು ತಾಲ್ಲೂಕಿನಲ್ಲಿ ಕಳೇ ಕೀಳುತ್ತಿದ್ದಾರೆ. ಮುಂಜರಾಬಾದ್ ತಾಲ್ಲೂಕಿನಲ್ಲಿ ಪ್ರವಾಹ ಬಂದು ಪೈರು ಕೆಟ್ಟು ಹೋದ ಗದ್ದೆಗಳಲ್ಲಿ ಭತ್ತವನ್ನು ಪುನಃ ಬಿತ್ತುತ್ತಿದ್ದಾರೆ. ಅರಕೀಕೆರೆ ತಾಲ್ಲೂಕಿನಲ್ಲಿ ರಾಗಿ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಭತ್ತ, ರಾಗಿ, ಹರಳು, ಭತ್ತ, ತೊಗರಿ, ಮೆಣಸಿನಕಾಯಿ ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಹಾಸನ ಮತ್ತು ಅರಕಲ್‌ಗೂಡು, ಈ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಗಿಡ್ಡರಾಗಿ; ಮತ್ತು ಅರಕಲ್‌ಗೂಡು ತಾಲ್ಲೂಕಿನಲ್ಲಿ ತಡಗಣಿ, ಇವುಗಳು ಕುಯ್ಯಲ್ಪಡುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಣ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮುಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬೂ, ಕಳೇ ಜ್ವರವು, ಮತ್ತು ಆವುಕಂಬೆಯೂ, ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆ. ಮಲೆನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆ ಫಸಲಿಗೆ "ಕೊಳೇ" ರೋಗವು ಹಿಡಿದು ಇದೆ.

ಬಿತ್ತನೆಯಾದ ಪೈರುಗಳು—ಹೊನ್ನಾಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ ಮತ್ತು ನವಣೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೆನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಚನ್ನಗಿರಿ, ಶಿಕಾರಿಪುರ, ಸೊರಬ, ನಗರ, ಈ ತಾಲ್ಲೂಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಸಿಡುಬು ಇರುತ್ತಿದೆ. ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ, ಹೊನ್ನಾಳಿ ತಾಲ್ಲೂಕಿನಲ್ಲಿಯೂ ಮತ್ತು ಶಿವಮೊಗ್ಗಾ ಕಸಬಾದಲ್ಲಿಯೂ ಪ್ಲೇಗ್ ಇದ್ದುಕೊಂಡು ಇದೆ.

12. ಹುಲ್ಲೂ, ಮೇವೂ ಸಾಕಾದಷ್ಟು ಇವೆ. ಗೋವಾರೀ ರೋಗವು ನಾಗರದಲ್ಲಿ ಅಡಗಿ ಇದೆ. ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅದು ಇರುತ್ತಿದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸ್ಥಾಯ ಕೆಲಸಗಳು—ಚಿಕ್ಕ ಮಗಳೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಮತ್ತು ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿಯೂ, ಭತ್ತದ ಸಸಿಯನ್ನು ಕಿತ್ತು ನಾಟಿ ಇದ್ದಾರೆ.

ನಿಂತಿರುವ ಪೈರುಗಳು—ಚಿಕ್ಕ ಮಗಳೂರು, ಕಡೂರು, ತರೀಕೆರೆ, ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿ ಭತ್ತ; ಚಿಕ್ಕ ಮಗಳೂರು, ಕಡೂರು, ತರೀಕೆರೆ, ಇವುಗಳಲ್ಲಿ ರಾಗಿ, ತೊಗರಿ ಮತ್ತು ಅವರೆ; ಕಡೂರು ಮತ್ತು ತರೀಕೆರೆಯಲ್ಲಿ ಜೋಳ, ಉದ್ದು ಮತ್ತು ಹೆಸರು; ಕಡೂರಿನಲ್ಲಿ ಹುರುಳಿ, ಧನಿಯ, ಗೋಧಿ, ಹರಳು ಮತ್ತು ಮೆಣಸಿನಕಾಯಿ; ಕಡೂರು, ಕೊಪ್ಪ, ಎಡೇಹಳ್ಳಿ, ಇವುಗಳಲ್ಲಿ ಕಬ್ಬು; ಶೃಂಗೇರಿಯಲ್ಲಿಯೂ ಮತ್ತು ಕೊಪ್ಪದಲ್ಲಿಯೂ ಅಡಿಕೆ; ಕೊಪ್ಪದಲ್ಲಿ ಕಾಫಿ ಮತ್ತು ಯಾಲಕ್ಕಿ; ಇವುಗಳೆಲ್ಲಾ ಒಳ್ಳೆ ಸ್ಥಿತಿಯಲ್ಲಿವೆ. ಆದರೆ, ಶೃಂಗೇರಿಯಲ್ಲಿಯೂ ಮತ್ತು ಕೊಪ್ಪದಲ್ಲಿಯೂ ಅಡಿಕೆ ಫಸಲಿಗೆ "ಕೊಳೇ" ರೋಗವು ಹಿಡಿದು ಇದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕಡೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ, ಅವರೆ, ಸಾವೆ ಮತ್ತು ನವಣೆ; ಇವುಗಳು ಬಿತ್ತಲ್ಪಟ್ಟಿವೆ.

ಕುಯ್ಯಲಾದ ಪೈರುಗಳು—ಮತ್ತು ಉತ್ಪತ್ತಿಯ ಅಂದಾಜು :—

ರಾಗಿ—ಉತ್ಪತ್ತಿ 8 ಆಣೆ; ಧನಿಯ ಉತ್ಪತ್ತಿ 4 ಆಣೆ;
ಚಿಕ್ಕ ಮಗಳೂರಿನಲ್ಲಿ, ಕಡೂರಿನಲ್ಲಿ ಭತ್ತ ಮತ್ತು ಕಬ್ಬು.
ಕೊಪ್ಪದಲ್ಲಿ ಸ್ವಲ್ಪಮಟ್ಟಿಗೆ ಯಾಲಕ್ಕಿ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ಕಸಬಾ ಚಿಕ್ಕ ಮಗಳೂರಿನಲ್ಲಿ ಪ್ಲೇಗೂ ಮತ್ತು ಮೂಡಿಗೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಸಿಡುಬೂ, ಇವು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಶೃಂಗೇರಿ, ತರೀಕೆರೆ, ಚಿಕ್ಕ ಮಗಳೂರು, ಇವುಗಳಲ್ಲಿ "ದೊಡ್ಡ ರೋಗವು" ಅಡಗಿ ಇದ್ದರೂ ಕಸಬಾ ಮೂಡಿಗೆರೆಯಲ್ಲಿಯೂ ಮತ್ತು ಅದರ ಸುತ್ತು ಮುತ್ತಲು ಇರುವ ಊರುಗಳಲ್ಲಿಯೂ, ಮತ್ತು ಎಡೇಹಳ್ಳಿ ಸಬ್ ತಾಲ್ಲೂಕು ವೇಲ್‌ಗದ್ದೆ ಗ್ರಾಮದಲ್ಲಿಯೂ ಅದು ಪುರೂ ಆಗಿದೆಯೆಂದೂ ರಿಪೋರ್ಟಾಗಿದೆ. ರೋಗವು ಹರಡದ ಹಾಗೆ ಇರುವದಕ್ಕಾಗಿ ತಕ್ಕ ಏರ್ಪಾಡುಗಳು ತೆಗದುಕೊಳ್ಳಲ್ಪಟ್ಟಿವೆಯೆಂದೂ, ಮತ್ತು ರೋಗಗ್ರಸ್ಥ ಜಾರ್ವಾರುಗಳಿಗೆ ಕ್ಯಾಟಲ್ ಡಿಸೀಜ್ ಇನ್‌ಸ್ಪೆಕ್ಟರವರಿಂದ ತಿಳಿಸಲ್ಪಟ್ಟಿಂಥಾ, ಮತ್ತು ಇತರ ನಾಡು ಚಿಕಿತ್ಸಾ ವಿಧಾನಗಳ ಮೇರಿಗೆ, ಔಷಧಗಳು ಕೊಡಿಲ್ಪಡುತ್ತಿವೆಯೆಂದೂ ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಹಿರಿಯೂರು ತಾಲ್ಲೂಕಿನ ಕುನೀಕೆರೆ, ದೊಡ್ಡಘಟ್ಟ, ಪರಮೇನಹಳ್ಳಿ, ವೂದುವಳ್ಳಿ, ಹಿಂದಾಸ್ ಕಟ್ಟೆ, ಈ ಗ್ರಾಮಗಳಲ್ಲಿಯೂ, ಮತ್ತು ಜಗಲೂರು ತಾಲ್ಲೂಕಿನ ಪೂರ್ವಭಾಗದಲ್ಲಿರುವ ಗ್ರಾಮಗಳಲ್ಲಿಯೂ, ಇವುಗಳಲ್ಲಿ ಮಳೇ ಇಲ್ಲದ್ದರಿಂದ ಪೈರುಗಳು ಬಾಡುತ್ತಿರುವುದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ದೇವನಗೆರೆ ತಾಲ್ಲೂಕಿನಲ್ಲಿ ಅರಳೆ ಮತ್ತು ನವಣೆ. ಹೊಸದುರ್ಗದ ತಾಲ್ಲೂಕಿನಲ್ಲಿ ಸಾಲ್, ಭತ್ತ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಸೆಪ್ಟಂಬರ್ 9ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.

Government Press, Bangalore—1907.

202

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ಉದ್ದು, ಹೆಸರು, ಹುರುಳಿ, ಇವುಗಳನ್ನು ಬಿತ್ತುವದಕ್ಕೆ ತಯಾರ್ಮಾಡುತ್ತಿದಾರೆ. ಚಾಮರಾಜನಗರ, ಶ್ರೀರಂಗಪಟ್ಟಣ, ಹೆಗ್ಗಡದೇವನಕೋಟೆ ಮೇಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು ತಾಲ್ಲೂಕಿನಲ್ಲಿ ಪೈರುಗಳು ಬಾಡಿಹೋಗುತ್ತಿವೆಯೆಂದು ರಿಪೋರ್ಟಾಗಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಎಡತೊರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕ್ಯೆರಾಗಿಯನ್ನೂ ಮತ್ತು ಹುರುಳಿಯನ್ನೂ ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಮೈಸೂರು, ಹುಣಸೂರು, ಎಡತೊರೆ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಎಳ್ಳು ; ಮೈಸೂರು, ನಾಗಮಂಗಲ, ಎಡತೊರೆ, ಗುಂಡ್ಲುಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ ; ಮೈಸೂರು, ಹುಣಸೂರು, ಹೆಗ್ಗಡದೇವನಕೋಟೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ ; ಹುಣಸೂರು, ಕೃಷ್ಣರಾಜಪೇಟೆ ಇವುಗಳ ಕೆಲವು ಭಾಗಗಳಲ್ಲಿ ಭತ್ತ, ಮತ್ತು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಬ್ಬು, ಉದ್ದು, ಹೆಸರು ; ಇವುಗಳನ್ನು ಕುಯ್ಯುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಮಂಡ್ಯ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮೈಸೂರು, ಹುಣಸೂರು, ನಂಜನಗೂಡು, ಈ ತಾಲ್ಲೂಕುಗಳಲ್ಲಿಯೂ ಮತ್ತು ಹುಣಸೂರು, ಮಂಡ್ಯ, ನಂಜನಗೂಡು, ಈ ಕಸಬಾಗಳಲ್ಲಿಯೂ, ಪ್ಲೇಗು ಇರುತ್ತಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ, ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ನಂಜನಗೂಡು ತಾಲ್ಲೂಕಿನಲ್ಲಿ ಆಲಗಂಚಿ ಗ್ರಾಮದಲ್ಲಿ ದನಗಳಿಗೆ ಬಂದಿದ್ದ "ಕಾಲುಜ್ವರ ಮತ್ತು ಬಾಯಿಜ್ವರ" ಇವುಗಳು ಈಗ ಕಮ್ಮಿಯಾಗಿವೆ. ಎಲ್ಲಾ ಕಡೆ ಥುಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹಾಸನ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಕಳೀ ಕೀಳುತ್ತಿದ್ದಾರೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಪ್ರವಾಹ ಬಂದು ಪೈರು ಕೆಟ್ಟು ಹೋದ ಗದ್ದೆಗಳಲ್ಲಿ ಭತ್ತವನ್ನು ಪುನಃ ಬಿತ್ತುತ್ತಿದ್ದಾರೆ. ಅರಕೀಕೆರೆ ತಾಲ್ಲೂಕಿನಲ್ಲಿ ರಾಗಿಯು ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಭತ್ತ, ರಾಗಿ, ಕಬ್ಬು, ಹುರಳಿ, ಹುಚ್ಚೆಳ್ಳು, ತೊಗರಿ, ಮೆಣಸಿನಕಾಯಿ, ಇವುಗಳು ಬಳ್ಳೀ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರು—ಚನ್ನರಾಯಪಟ್ಟಣ ಮತ್ತು ಹೊಳೇನರಸೀಪುರ, ಈ ತಾಲ್ಲೂಕುಗಳಲ್ಲಿ ಹುರುಳಿಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಕಾರ್‌ಭತ್ತ, ಕಬ್ಬು, ಹುಚ್ಚೆಳ್ಳು, ಮತ್ತು ಜೋಳ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ ಮತ್ತು ಬೇಲೂರು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೀ ಜ್ವರವು, ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶಿವಮೊಗ್ಗ, ಸಾಗರ, ನಗರ, ಈ ತಾಲ್ಲೂಕುಗಳ ಕೆಲವು ಬಾಗಗಳಲ್ಲಿ ಕಳೆ ಕೀಳುವ ಕೆಲಸಗಳು ನಡಿಯುತ್ತಿವೆ. ನಗರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತದ ಸಸಿಗಳನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಬಳ್ಳೀ ಸ್ಥಿತಿಯಲ್ಲಿವೆ. ಮಲೆನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆ ಫಸಲಿಗೆ "ಕೊಳೀ" ರೋಗವು ಹಿಡಿದು ಇದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊನ್ನಾಳಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿ ಸಿಡುಬೂ ಮತ್ತು ಹೊನ್ನಾಳಿ ಹೋಬಳಿಯ ಕೆಲವು ಭಾಗಗಳಲ್ಲಿ ಜ್ವರವೂ ಇವು ಇರುತ್ತಿವೆ. ಚೆನ್ನಗಿರಿ ಮತ್ತು ಸಾಗರದ ತಾಲ್ಲೂಕುಗಳಲ್ಲಿ ಸಿಡುಬು ಗುಣಮುಖವಾಗಿದೆ. ಹೊನ್ನಾಳಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇನ್ನೂ ಇರುತ್ತಿದೆ ; ಮತ್ತು ಶಿವಮೊಗ್ಗ ಕಸಬಾದಲ್ಲಿ ಷರೂ ಆಗಿ ಇದೆ.

12. ಹುಲ್ಲೂ, ಮೇವೂ ಸಾಕಾದಷ್ಟು ಇವೆ. ನಗರದ ತಾಲ್ಲೂಕು ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಗೋ ಮಾರೀರೋಗವು ಇರುತ್ತಲಿದೆ. ನಗರದ ತಾಲ್ಲೂಕಿನಲ್ಲಿ ಅದು ಶಮನವಾಗಿದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಮೂಡಿಗೆರೆ, ಎಮ್ಮೇಹಳ್ಳಿ, ಕೊಪ್ಪ ಈ ತಾಲ್ಲೂಕುಗಳಲ್ಲಿ ಭತ್ತದ ಸುಗ್ಗಿ ನಡೆಯುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕಮಗಳೂರಿನಲ್ಲಿ ಕಬ್ಬು, ಭತ್ತ, ರಾಗಿ, ತೊಗರಿ ಮುಂತು ಅವರೆ; ಮೂ
ತ್ತ ಮತ್ತು ರಾಗಿ; ಎಮ್ಮೇಹಳ್ಳಿಯಲ್ಲಿ ಕಬ್ಬು, ಕಾಫಿ ಮತ್ತು ಭತ್ತ; ಕೈಗೇರಿಯಲ್ಲಿ ಅಡಿಕೆ; ಕ
ಕಬ್ಬು, ಜೋಳ, ರಾಗಿ, ಹುರುಳಿ, ಅವರೆ, ತೊಗರಿ, ಉದ್ದು, ಹೆಸರು, ಭತ್ತ, ಮತ್ತು ಮೆಣಸಿನಕಾಯಿ; ತರೀಕೆರೆಯಲ್ಲಿ ಭತ್ತ, ಕಬ್ಬು, ರಾಗಿ, ಜೋಳ, ಉದ್ದು, ಹೆಸರು ಮೆಣಸಿನಕಾಯಿ; ಕೊಪ್ಪದಲ್ಲಿ ಭತ್ತ, ಕಬ್ಬು, ಅಡಿಕೆ ಮತ್ತು ಕಾಫಿ; ಇವುಗಳೆಲ್ಲದರಲ್ಲಿಯೂ ಬಳ್ಳಿ ಮತ್ತು ಕೈಗೇರಿಯಲ್ಲಿಯೂ ಅಡಿಕೆ ಭತ್ತಗಳಿಗೆ "ಕೊಳೇರೋಗವು" ಹಿಡಿದು ಕೆಟ್ಟಿದೆಯೆಂದು ಚಿಕ್ಕಮಗಳೂರು, ಮೂಡಿಗೆರೆ, ಇವುಗಳಲ್ಲಿ ಹೊಸ್ತಾಗಿ ಆದ ಮಳೆಯಿಂದ ರಾಗಿಯು ಸ್ವಲ್ಪ ಕೆಟ್ಟಿದೆ ಟೂರಾಗಿದೆ.

ಭತ್ತನೆಯಾದ ಪೈರುಗಳು—ಮೂಡಿಗೆರೆ, ಎಮ್ಮೇಹಳ್ಳಿ, ಕೊಪ್ಪ, ಇವುಗಳಲ್ಲಿ ಭತ್ತ, ಮತ್ತು ಕೈಗೇರಿಯ ಗಳಲ್ಲಿ ರಾಗಿ.

ಕುಯ್ಯಲಾದ ಪೈರುಗಳು—ಚಿಕ್ಕಮಗಳೂರಿನಲ್ಲಿ ರಾಗಿ; ತರೀಕೆರೆಯಲ್ಲಿ ಕಬ್ಬು, ಮತ್ತು ಭತ್ತ; ಕೊಪ್ಪ ಕೆಲವು ಭಾಗಗಳಲ್ಲಿ ಯಾಲಕ್ಕಿ—ಇವುಗಳು ಎಲ್ಲವೂ ಸ್ವಲ್ಪವಾಗಿಯೇ ಆಗಿದೆ.

10. ಕಾಲದ ಅಯತಿಯು ಜೆನ್ನಾಗಿದೆ. ಆಹಾರ ಜೆನ್ನು ಸಾಕು.

11. ಈಗಲೂ ಚಿಕ್ಕಮಗಳೂರಿನಲ್ಲಿ ಪ್ಲೇಗ್ ಇರುವದು ಹೊರತು, ಜನಾರೋಗ್ಯವು ಸಾಧಾರಣವಾಗಿ ಜೆನ್ನಾ

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ತರೀಕೆರೆ, ಚಿಕ್ಕಮಗಳೂ ಇವುಗಳಲ್ಲಿ "ದೊಡ್ಡ ರೋಗವು" ಇಲ್ಲಿ ಮುಂ ದಲ್ಲಿದೆಯೆಂದು ರಿಪೋರ್ಟಾಗಿದೆ; ಆದರೆ, ಅದು ಮೂಡಿಗೆರೆ ತಾಲ್ಲೂ ಮುದಲ್ಲಿ ಹುರೂ ಆಗಿದೆಯೆಂದೂ, ಮತ್ತು ಕ್ಯಾಟಲ್ ಪ್ಲೇಗ್ ಇನ್‌ಸ್ಪೆಕ್ಟರವರಿಂದ ಬಂದ ಚಿಕಿತ್ಸಾ ವಿಧಾನಗಳ ಪ್ರ ಔಷಧಗಳು ಕೊಡಲ್ಪಡುತ್ತಿವೆಯೆಂದೂ, ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಾಕ್ಷ್ಯವೆ.

ಚಿಕ್ಕದುರ್ಗ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಜೋಳ, ರಾಗಿ, ಹುರುಳಿ, ಹೆಸರು, ಉದ್ದು, ಅರಳೆ, ನವಣೆ, ಭತ್ತ, ಹೊಗೇಸೊಪ್ಪು, ಕಬ್ಬು, ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಬೇವನಗೆರೆ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿದೆ.

ಭತ್ತನೆಯಾದ ಪೈರುಗಳು—ದೇವನಗೆರೆ ತಾಲ್ಲೂಕಿನಲ್ಲಿ ಅರಳೆ ಮತ್ತು ನವಣೆ. ಹೊಳಕಾಲ್ಲೂ ಭತ್ತ ಮತ್ತು ಹುರುಳಿ.

ಕುಯ್ಯಲಾದ ಪೈರು—ಏನೂ ಇಲ್ಲ.

10. ಕಾಲದ ಅಯತಿಯು ಜೆನ್ನಾಗಿದೆ. ಆಹಾರ ಜೆನ್ನು ಸಾಕ್ಷ್ಯವೆ.

11. ಜನಾರೋಗ್ಯವು ಜೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕ್ಷ್ಯವೆ.

ಎ. ರಂಗಸ್ವಾಮಿ
ರಿ

ಬೆಂಗಳೂರು,
1907ನೆಯ ವರ್ಷದ ಸೆಪ್ಟೆಂಬರ 2ನೆಯ ತಾರೀಖು.